


# ಗಾಲೀಬನ ಜೊತೆಗೆ

ನಾನು ನೀನು ಒಂದೇ ಎಂದವಳೂ
ನೀನು ನಾನು ಒಂದೇ ಎಂದವನೂ
ಇಬ್ಬರೂ ಈಗ ಬೇರೆ ಬೇರೆಯವರ ಜೊತೆ
ಒಂದೇ ಆಗುವುದರಲ್ಲಿದ್ದಾರೆ

ಬಾ ಗಾಲಿಬ್
ಈ ದೀರ್ಘ ಅನಾರೋಗ್ಯದ ಕುರಿತು
ಆರೋಗ್ಯಕರ ಚರ್ಚೆ ಮಾಡೋಣ

ಗಾಲಿಬ್ ಹೇಳಿದ–
ಹರಿಯುವ ನೀರಿನಲ್ಲಿ ಮೇಲ್ಮುಖ ತೇಲುವ
ವಸ್ತುಗಳನ್ನೇ ಜನ ನೋಡುವುದು
ಆಳ ಅವರಿಗೆ ಕಾಣುವುದೇ ಇಲ್ಲ
ಆಳ ಎಂದರೆ ಅವರಿಗೆ ರಾಡಿ

ರಾಡಿಯ ವಿಶೇಷ ಯಾರಿಗೆ ಗೊತ್ತು ಮತ್ತು
ಆಳ ಮುಳುಗುವಿಕೆ ಕೇಳುತ್ತದೆ

ಮೌನದ ಮಾತು
ಅರ್ಥವಾಗುವ ಕಾಲಕ್ಕೆ ಎಲ್ಲರೂ ಕಾಯುತ್ತಾರೆ
ತಾನಾಗಿಯೇ ಯಾವುದೂ ಅರ್ಥವಾಗುವುದಿಲ್ಲ
ಎಂಬ ಸಣ್ಣ ಸತ್ಯವನ್ನೂ ಮರೆತಂತೆ

● **ಕೃಷ್ಣ ದೇವಾಂಗಮಠ**

ಕಲೆ: ವಾಗೀಶ ಹೆಗಡೆ